ಶ್ರೀ ಎಸ್. ಎಂ. ಶೀರನಾಳಿ ಚಿಂದ್ರ ಶೇಖರ್.—ವ ನ್ಯ ಮಂತ್ರಿಗಳು ನಾನು ಹೇಳಿದಂಥ ವಿಷಯ ವನ್ನು ಸತ್ಯಕ್ಕೆದೂರ ಎಂದು ಹೇಳಿದ್ದಾರೆ. ಪಬ್ಲಿಕ್ ಸರ್ವೀಗ್ ಕಮಿಷನ್ ಚೆರ್ಮನ್ ಅವರು ಹೇಳಿರತಕ್ಕ ವಿಚಾರ ಇದು. ಮೆಡಿಕಲ್ ಗ್ರಾಜುಯೇಟ್ಸ್, ಎಕ್ಸ್‌ಪರ್ಟ್ಸ್ ಎಂದು ಈ ರೀತಿ ಒಪಿನಿಯನ್ ಕೊಡುತ್ತಿದ್ದಾರೆ. ಆದ್ದರಿಂದ ನಾವು ಹೆಲ್ಪ್‌ಲೆಸ್ ಎಂದು ಅವರು ಹೇಳಿದ್ದಾರೆ. ನೂರಾರು ಜನ ಎಂಎಸ್‌ಸಿ, ಗ್ರಾಜುಯೇಟ್ಸ್ ಅವರನ್ನು ಭೇಟಿ ಮಾಡಿದಾಗ ಅವರು ಹೀಗೆ ಹೇಳಿದ್ದಾರೆ. ಆದ್ದರಿಂದ ಇದು ಸುಳ್ಳು ಎಂದು ಹೇಳಿದರೆ ನಾನು ಏನು ಹೇಳಲಿಕ್ಕಾಗುತ್ತದೆ. ?

10-30 A.M.

SRI H. SIDDAVEERAPPA.—Government have not issued any directive. Government have said that they must be treated on a par and they are also equally eligible for being selected. If the gentleman who represents the Department has said it, it is not correct. As I have said, there is a Government notification to that effect. It they have said, it is contary to that notification.

(iv) *re. Demolition of house of Harijans in Bijapure* —

†ಶ್ರೀ ಜೆ. ಎಲ್. ಕಬಾಡಿ (ಬಳ್ಳಾರಿ).—ಬಿಜಾಪುರದ ಇಂದಿರಾನಗರದಲ್ಲಿ ಇರತಕ್ಕ ಮನೆ ಗಳಲ್ಲಿದ್ದ ಜನರನ್ನು ಸರ್ಕಾರದವರು ಉಚ್ಚಾಟನೆ ಮಾಡಿದ್ದರ ಬಗ್ಗೆ ನಾನು ಒಂದೆರಡು ಮಾತನ್ನು ಹೇಳ ಬೇಕಾಗಿದೆ. ಆಲ್ಲಿಯ ಜನರು ಮಕ್ಕಳು ಮರಿಗಳನ್ನು ಕಟ್ಟಿಕೊಂಡು ಊರಿ ಬಿಸಿಲಿನಲ್ಲಿ ನಿಂತಿದ್ದಾರೆ. ಅವರ ಬಗ್ಗೆ ಯಾವ ತರಹದ ವ್ಯವಸ್ಥೆಯನ್ನೂ ಸರ್ಕಾರದವರು ಮಾಡಲಿಲ್ಲ. ಮಾನ್ಯ ರಾಥೋಡ್ ಅವರು ಬಿಜಾಪುರಕ್ಕೆ ಬಂದಾಗ ಅವರನ್ನು ಹೇಳಿ ಕೇಳಿ ಎಲ್ಲಾ ಆಯಿತು. ಅವರು ಅವರ ಮುಂದೆ ಪ್ರದರ್ಶನ ಮಾಡಿದಾಗ, ಪೋಲೀಸರ ಕಡೆಯಿಂದ ಆ ಜನರನ್ನು ತಮ್ಮಮನೆಗಳಿಂದ ಹೊರಗೆ ಹಾಕಿದ್ದಾರೆ ಪೇಪರ್‌ನವರನ್ನು ಸಹಿತ ಅಲ್ಲಿಗೆಬಿಟ್ಟಿಲ್ಲ. ಪ್ರೆಸ್‌ನವರನ್ನು ಸಹಿತ ಪೋಲೀಸರಿಂದ ಹೊರಗೆ ದಬ್ಬಿಸಿ ದ್ದಾರೆ, ಇದು ಸಹ ಪೇಪರ್‌ನಲ್ಲಿ ಬಂದಿದೆ. ನಾನು ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಫೋನ್ ಮಾಡಿ ಕೇಳಿದಾಗ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಕೂಡ ಆ ಜನ ಊರಿ ಬಿಸಿಲಿನಲ್ಲಿ ನಿಂತಿ ದ್ದಾರೆ. ಬಿಜಾಪುರದ ಜಿಲ್ಲಾಧಿಕಾರಿಗಳಂ ಕೈಕೊಂಡಂಥ ಕ್ರಮ ಏನು ಇದೆ ಇದಂ ಶೋಚನೀಯವಾದದಂ. ಬಡ ಜನರಿಗೆ ತಮ್ಮಮನೆಗಳನ್ನು ಕಳೆದುಕೊಂಡು ಬಹಳ ಲುಕ್ಸಾನು ಆಗಿದೆ, ಇದಕ್ಕೆ ಜವಾಬ್ದಾರರು ಯಾರು ಇದನ್ನು ತಾವು ಸೀರಿಯಸ್ ಆಗಿ ಯೋಚನೆ ಮಾಡಬೇಕು. ಇದರಿಂದ ಆ ಜನರಲ್ಲಿ ಒಂದು ಆ ಕ್ರೋಶ ಮನೋಭಾವ ಉಂಟಾಗಿದೆ. ಇವತ್ತು ಸರ್ಕಾರದವರು ಬಡಜನರಿಗೆ ಯಾವ ತರಹ ಆಶ್ರಯ ವನ್ನು ಕೊಟ್ಟಿಲ್ಲ. ಮಾನ್ಯ ರಾಥೋಡ್ ಅವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಇಮಿಡಿಯಟ್ ಆಗಿ ವ್ಯವಸ್ಥೆಮಾಡುತ್ತೇವೆಂದು ಹೇಳಿದ್ದರು. ಇದರ ಬಗ್ಗೆ ಮಾನ್ಯ ಸರ್ಕಾರದವರು ತಕ್ಷಣ ಯೋಚನೆ ಮಾಡಬೇಕು.

†ಶ್ರೀ ಡಿ ಕೆ. ನಾಯ್ಕರ (ನ್ಯಾಯ ಮತ್ತು ಪೌರಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಇದಂ ಪ್ರೈವೇಟ್ ಓನರ್ ಜಾಗ ಎಂದು ನಮಗೆ ಮಾಹಿತಿ ಬಂದಿದೆ. ಇಲ್ಲಿ ಒಂದು ಟ್ರೈಸಿಂಗ್‌ಕಾಲೇಜು ಕಟ್ಟ ಬೇಕು ಎಂದು ಇದನ್ನು ಸರ್ಕಾರದವರು ಅಕ್ವಿಜಿಷನ್ ಮಾಡಿದ್ದಾರೆ. ಇದನ್ನು ಅಕ್ವಿಯರ್ ಮಾಡಿ ಮಾಡಿ ಎರಡೂವರೆ ಲಕ್ಷ ರೂಪಾಯಿಗಳ ಕಾಂಪನ್ಸೇಷನ್ ಅನ್ನು ಇದರ ಮಾಲೀಕರಿಗೆ ಕೊಟ್ಟಿದ್ದಾರೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಸ್ಟಾರ್ಟ್ ಮಾಡಿದಾಗ ಜನರು ಇದನ್ನು ಆಕ್ಯುಪೈ ಮಾಡಿಕೊಂಡು ಗುಡಿಸಲು ಹಾಕಿಕೊಂಡಿ ದ್ದಾರೆ. ಇದು ಪಬ್ಲಿಕ್ ಪರ್ಪಸ್‌ಗೆ ಎಂದು ಎರಡು ಸಲ ಎವಿಕ್ಟ್ ಮಾಡಬೇಕು ಎಂದು ಹೇಳಿದಾಗಲೂ ಕೂಡ ಇವರು ಮಾಡಿಲ್ಲ ಇವರಿಗೆ ಅನಾನುಕೂಲ ಆಗಬಾರದು ಎಂದು ಆಲ್ಟರ್ನೇಟಿವ್ ಪ್ರಾವಿಷನ್ ಮಾಡಿ ಎವಿಕ್ಟ್ ಮಾಡಬೇಕು ಎಂದು ಡೈರೆಕ್ಷನ್ ಕೊಟ್ಟಿದ್ದಾರೆ ಇದನ್ನು ನಾನು ಜಿಲ್ಲಾಧಿಕಾರಿಗಳಿಂದ ಫೋನ್ ಮೂಲಾಂತರ ತಿಳಿದು ಕೊಂಡಿದ್ದೇನೆ. ಆಲ್ಟರ್ನೇಟೀವ್ ಪ್ರಾವಿಷನ್ ಮಾಡಿ ಎವಿಕ್ಟ್ ಮಾಡುವಂಥ ಕ್ರಮವನ್ನು ತೆಗೆದುಕೊಂಡಿದ್ದಾರೆ. ಈ ಮಾಹಿತಿ ನನಗೆ ಫೋನ್ ಮೂಲಕ ಬಂದಿದೆ.

ಶ್ರೀ ಜೆ. ಎಲ್. ಕಬಾಡಿ.—ಅಕ್ವಿಜಿಷನ್ ಪ್ರೊಸಿಡಿಂಗ್ ಎಂದು ಮುಗಿಯಿತು. ಆವರು ಎಂದು ಅಲ್ಲಿಗೆ ಹೋಗಿದ್ದಾರೆ? ಆವರು ಒಂದು ವರ್ಷದ ಕೆಳಗೆ ಮನೆಗಳನ್ನು ಅಲ್ಲಿ ಕಟ್ಟಿಕೊಂಡಿದ್ದಾರೆ. ಅಕ್ವಿಜಿಷನ್ ಪ್ರೊಸಿಡಿಂಗ್ ಎಂದು ಮುಗಿಯಿತು ಎನ್ನುವುದನ್ನು ಹೇಳುತ್ತೀರಾ ? ಕೆಲವು ಜನರು ೫—೧೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಅಲ್ಲಿ ಮನೆಗಳನ್ನು ಕಟ್ಟಿ ಕೊಂಡಿದ್ದಾರೆ. ಉರ್ದು ಟ್ರೈನಿಂಗ್ ಕಾಲೇಜಿಗೆ ಬೇರೆ ಜಾಗವನ್ನು ಕೊಡಬಹುದಿತ್ತು. ಮತ್ತು ಜನರಿಗೆ ಆಗತಕ್ಕ ತೊಂದರೆಯನ್ನು ತಾವು ತಪ್ಪಿಸಲಿಕ್ಕೆ ಸಾಧ್ಯವಾಗುತ್ತಿರಲಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ದಯಮಾಡಿ ಒಂದು ದುರಭ್ಯಾಸವನ್ನು ತಾವು ನಿಲ್ಲಿಸಬೇಕು. ಏನೆಂದರೆ ಸದಸ್ಯರುಗಳು ಆಫೀಸರ್ಸ್ ಗ್ಯಾಲರಿ ಹತ್ತಿರ ನಿಂತುಕೊಂಡು ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ಮಂತ್ರಿಗಳು ಏನಾದರೂ ಮಾಹಿತಿ ಬೇಕಾದರೆ ಸೆಕ್ರೆಟರಿಗಳನ್ನು ಕೇಳಬಹುದು. ಮೆಂಬರ್ಸ್‌ಗಳೂ ಸಹ ಲಾಂಜ್‌ದಲ್ಲಿ ಹೊರಗಡೆ ಕರೆದುಕೊಂಡು ಹೋಗಿ ಮಾತನಾಡಬಹುದು. ದಯಮಾಡಿ ಇಲ್ಲಿಯೇ ಮಾತನಾಡುವಂಥ ಅಭ್ಯಾಸವನ್ನು ಆವರು ಬಿಟ್ಟು ಬಿಡ ಬೇಕು ಮಾನ್ಯ ಸದಸ್ಯರು ಇಲ್ಲೇ ನಿಂತುಕೊಂಡು ಮಾತನಾಡ ತಕ್ಕ ಈ ಒಂದು ಅಭ್ಯಾಸವನ್ನು ದಯಮಾಡಿ ನಿಲ್ಲಿಸಬೇಕು.

ಶ್ರೀ ಜೆ. ಎಲ್. ಕಬಾಡಿ.—ಬಿಜಾಪುರದ ಎಂ.ಪಿ.ಗಳು ಒಬ್ಬರಿಂದ ಇಂದಿರಾನಗರದ ಉದ್ಘಾಟನೆ ಯಾಯಿತು. ಸರ್ಕಾರದ ರಾಜ್ಯಮಂತ್ರಿಗಳು ಇದರ ಬಗ್ಗೆ ಒಂದು ಆಶ್ವಾಸನೆಯನ್ನು ನಮಗೆ ಕೊಟ್ಟಿದ್ದರು, ಆವರಲ್ಲಿ ನಮಗೆ ನಂಬಿಕೆ ಇತ್ತು ಆವರು ನಂಬಿಕೆಯನ್ನು ಕಳೆದು ಕೊಂಡಿದ್ದರಿಂದ ಈ ಪರಿಸ್ಥಿತಿ ಬಂದಿದೆ. ಬಡವರಿಗೆ ಅಲ್ಲಿ ಬಹಳ ನಷ್ಟವಾಗಿದೆ, ಇದಕ್ಕೆ ಯಾರು ಜವಾಬ್ದಾರರು ? ಆದ್ದರಿಂದ ನಾನು ಕೇಳುತ್ತೇನೆ, ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಎಂದು ಆಯಿತು, ಮಾನ್ಯ ರಾಥೋಡ್ ಆವರು ಇದನ್ನು ಉದಾಘಟನೆಮಾಡಿದರು ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಡಿ. ಕೆ ನಾಯ್ಕರ್.—ಮಾನ್ಯ ರಾಥೋಡ್ ಆವರು ಇದನ್ನು ಉದ್ಘಾಟನೆ ಮಾಡಿದ ವಿಷಯ ನನಗೆ ತಿಳಿದು ಬಂದಿಲ್ಲ. ಅಕ್ವಿಜಿಷನ್ ಪ್ರೋಸಿಡಿಂಗ್ಸ್ ರೆವಿನ್ಯೂ ಡಿಪಾರ್ಟಮೆಂಟ್‌ನವರ ಡೈರೆಕ್ಷನ್ ಮುಂಖಾಂತರ ಆಗಿರುತ್ತದೆ. ಮಾನ್ಯ ರಾಥೋಡ್ ಆವರು ಇದು ಮುನಿಸಿಪಲ್ ಏರಿಯಾ ಎಂದು ತಿಳಿಸಿದ್ದರ ಮೇಲೆ ನಾನು ಜಿಲ್ಲಾಧಿಕಾರಿಗಳಿಗೆ ಫೋನ್ ಮುಖೇನ ಮಾಹಿತಿಯನ್ನು ಕೇಳಿಕೊಂಡೆ ಇದನ್ನು ಸರ್ಕಾರದವರು ಪಬ್ಲಿಕ್ ಪರ್ಪಸ್‌ಗೆ ಲಕ್ಷಗಟ್ಟಲೆ ಹಣ ಕೊಟ್ಟು ತೆಗೆದುಕೊಂಡಿದ್ದಾರೆ, ಆವರು ಅಲ್ಲಿ ಇರಲಿಕ್ಕೆ ಬರುವುದಿಲ್ಲ ಎಂದು ಒಂದು ಸಪರೇಟ್ ಪ್ರಾವಿಷನ್ ಮಾಡಿ ಎವಿಕ್ಟ ಮಾಡುವಂತೆ ಮಾಡಿದ್ದೇವೆಂದು ಆವರು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ನಾನು ಕ್ರಿಸ್ಟಲ್‌ಗ್ಲಾಸ್ ಫ್ಯಾಕ್ಟರಿಯಲ್ಲಿ ಟ್ರೇಜ್ ಯೂನಿಯನ್ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಟ್ರೇಡ್ ಯೂನಿಯನ್ ಆವರನ್ನು ಪೋಲೀಸರಿಂದ ಹೊಡೆಸಿದ್ದಾರೆ. ನಾನು ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಗುರುತರವಾದ ಆಪಾದನೆಯನ್ನು ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಮಾಡುತ್ತೇನೆಂದು ಹೇಳಿದ್ದರು. ಆದರಂತೆ ಆವರು ಹೇಳಿಕೆಯನ್ನು ಮಾಡಬೇಕು.

STATEMENT OF THE CHIEF MINISTER

re. Clashes between two unions at the Crystal Glass factory.—

SRI D. DEVARAJ URS (Chief Minister).—In the Mysore Crystal Glass Factory situated at Nagavara in Kadagondanahalli Police Station limits, the total strength of labour is 750. There are two unions amongst the employees of the factory. One is called the "Mysore Crystal Glass Factory Industries welfare Union" and the other is call d "Bangalore Industrial Estate and General workers Union". The former is controlled by the Management and the latter is controlled by the C.P.I, Majority of the workers belong to the Union led by the C.P I. Recently both the Unions presented their demands to the Management regarding wages, D.A. and other facilities. The managemant conceded to a certain extent their request for enhancement of wages.